ಕೆ.ಎಫ್.ಡಿ.ಸಿ.ಯ ನೌಕರರ ಸೌಲಭ್ಯಗಳ ಬಗ್ಗೆ

4198 (4913) : ಶ್ರೀ ಸದಾನಂದ ಗೌಡ ಡಿ.ವಿ (ಪುತ್ತೂರು) ಮಾನ್ಯ ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕರ್ನಾಟಕ ಮತ್ಸ್ಯೋದ್ಯಮದ ಹಿತದೃಷ್ಟಿಯಿಂದ 1971ರಲ್ಲಿ ಸ್ಥಾಪನೆಯಾದ ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮ (ಕೆಎಫ್‌ಡಿಸಿ) ಕಳೆದ 2002ರ ಡಿಸೆಂಬರ್ ತಿಂಗಳಿಂದ ನೌಕರರಿಗೆ ಸಂಬಳ ನೀಡದೇ ಇರಲು ಕಾರಣವೇನು?

ಆ) ಪದ್ಮನಾಭ ಆಯೋಗವು ಕೆ.ಎಫ್.ಡಿ.ಸಿ. ಆಡಳಿತ ಸಮಿತಿಯನ್ನು ತಕ್ಷಣವೇ ವಿಸರ್ಜಿಸಿ ನೌಕರರಿಗೆ ಸಲ್ಲತಕ್ಕ ಪೂರ್ಣ ಸೌಲಭ್ಯವನ್ನು ನೀಡಬೇಕೆಂದು ಸರ್ಕಾರಕ್ಕೆ ಶಿಫಾರಸ್ಸನ್ನು ಮಾಡಿರುವುದು ನಿಜವೆ?

ಇ) ಹಾಗಿದ್ದಲ್ಲಿ, ಸರ್ಕಾರವು ಇದುವರೆಗೆ ಈ ನೌಕರರಿಗೆ ಸಲ್ಲತಕ್ಕ ಬಾಕಿಯನ್ನು ನೀಡದೇ ಇರಲು ಕಾರಣವೇನು; ಮತ್ತು ಸರ್ಕಾರವು ಬಾಕಿ ಪಾವತಿಯನ್ನು ಮಾಡುವುದಿದ್ದಲ್ಲಿ ಎಂದು ಮಾಡುವುದು?

ಈ) ನೌಕರರ ವೇತನದಿಂದ ಭವಿಷ್ಯ ನಿಧಿಗೆ ಪಾವತಿಯಾಗಬೇಕಿರುವ ಸರ್ಕಾರದ ಪಾಲಿನ ವಂತಿಗೆಯನ್ನು ಕಳೆದ ಕೆಲವು ತಿಂಗಳಿಂದ ನೀಡದೇ ಇರಲು ಕಾರಣವೇನು?

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು)

ಅ) ವಿವಿಧ ಕಾರಣಗಳಿಂದಾಗಿ ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮವು ಉತ್ತಮ ಆರ್ಥಿಕ ಪರಿಸ್ಥಿತಿಯಲ್ಲಿರುವುದಿಲ್ಲ. ನಿಗಮದ ಕಾರ್ಯ ಚಟುವಟಿಕೆಗಳು ಮತ್ತು ಆದಾಯವು ಕಡಿಮೆಯಾಗಿರುವ ಕಾರಣ ನೌಕರರಿಗೆ ವಿವಿಧ ಅವಧಿಗೆ ವೇತನವನ್ನು ಪಾವತಿಸಿರುವುದಿಲ್ಲ.

ಆ) ಸಾರ್ವಜನಿಕ ಉದ್ದಿಮೆಗಳ ಪುನರ್‌ರಚನಾ ಆಯೋಗವು ಕೆ.ಎಫ್.ಡಿ.ಸಿ.ಯ ಮಂಡಳಿಯನ್ನು ವಿಸರ್ಜಿಸಲು ಶಿಫಾರಸ್ಸು ಮಾಡಿರುವುದಿಲ್ಲ. ಈ ಆಯೋಗವು ನಿಗಮವನ್ನು ಮುಚ್ಚುವ ಬಗ್ಗೆ ಶಿಫಾರಸ್ಸುಗಳನ್ನು ನೀಡಿರುತ್ತದೆ.

ಇ) ಈ ಬಗೆಗಿನ ತೀರ್ಮಾನವನ್ನು ಅಂತಿಮಗೊಳಿಸಬೇಕಾಗಿದೆ.

ಈ) ನಿಗಮದ ನೌಕರರ ಭವಿಷ್ಯ ನಿಧಿಗೆ ಸರ್ಕಾರವು ಯಾವುದೇ ವಂತಿಗೆಯನ್ನು ನೀಡುತ್ತಿಲ್ಲ.

ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮದ ನೌಕರರ ಭವಿಷ್ಯ ನಿಧಿ ಕುರಿತು

4200 (4914) : ಶ್ರೀ ಸದಾನಂದ ಗೌಡ ಡಿ.ವಿ. (ಪುತ್ತೂರು) ಮಾನ್ಯ ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮದ ನೌಕರರ ಭವಿಷ್ಯ ನಿಧಿಗೆ ಸರ್ಕಾರದ ವತಿಯಿಂದ ಎಷ್ಟು ಮೊತ್ತದ ವಂತಿಗೆ ಠೇವಣಿ ಬಾಕಿಯಿದೆ?

ಆ) ಇದನ್ನು ಭವಿಷ್ಯ ನಿಧಿಗೆ ಠೇವಣಿಯಿಡಲು ಸರ್ಕಾರ ಏನು ಕ್ರಮ ಕೈಗೊಂಡಿದೆ?

ಇ) ಸರ್ಕಾರದ ವಂತಿಗೆ ಭವಿಷ್ಯ ನಿಧಿಗೆ ಪಾವತಿಯಾಗದ ಕಾರಣ ಈಗಾಗಲೇ ನಿವೃತ್ತಿ ಹೊಂದಿದ ಸಿಬ್ಬಂದಿಗಳಿಗೆ ಭವಿಷ್ಯನಿಧಿ ಮೊತ್ತ ಪಾವತಿಯಾಗದೆ ತೊಂದರೆಯಾಗಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೆ;

ಈ) ಬಂದಿದ್ದಲ್ಲಿ ಈ ವಿಚಾರದಲ್ಲಿ ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು)

ಅ) ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮದ ನೌಕರರ ಭವಿಷ್ಯ ನಿಧಿಗೆ ಸರ್ಕಾರದಿಂದ ಯಾವುದೇ ಠೇವಣಿ ನೀಡುತ್ತಿಲ್ಲ ಮತ್ತು ಬಾಕಿಯಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ನಿಗಮದ ನೌಕರರ ಭವಿಷ್ಯ ನಿಧಿಗೆ ಸರ್ಕಾರವು ವಂತಿಗೆ ನೀಡುವುದಿಲ್ಲ.

ಈ) ಉದ್ಭವಿಸುವುದಿಲ್ಲ

ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮದ ನೌಕರರ ಸ್ವಯಂ ನಿವೃತ್ತಿಯ ಅವಕಾಶ

4915 (4915) : ಶ್ರೀ. ಸದಾನಂದಗೌಡ ಡಿ.ವಿ. (ಮತ್ತೂರು) ಮಾನ್ಯ ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮದ ನೌಕರರಿಗೆ ಸ್ವಯಂ ನಿವೃತ್ತಿ ಹೊಂದಲು ಅವಕಾಶ ಕಲ್ಪಿಸಿ ಸರ್ಕಾರ ಪ್ರತ್ಯೇಕ ಆದೇಶ ಹೊರಡಿಸಿದೆಯೇ?

ಆ) ಸರ್ಕಾರದ ಆದೇಶದಂತೆ ಎಷ್ಟು ಜನ ಸಿಬ್ಬಂದಿಗಳು ಸ್ವಯಂ ನಿವೃತ್ತಿ ಕೋರಿ ಸರ್ಕಾರಕ್ಕೆ ಅರ್ಜಿ ಸಲ್ಲಿಸಿರುತ್ತಾರೆ.

ಇ) ಅವರ ಮನವಿಗಳನ್ನು ಸರ್ಕಾರವು ಮಾನ್ಯ ಮಾಡಿದೆಯೇ? ಮಾಡಿದ್ದಲ್ಲಿ ಅವರಿಗೆ ಸಲ್ಲತಕ್ಕ ಬಾಕಿಗಳನ್ನು ಪಾವತಿಸಿ ನಿವೃತ್ತಿಗೊಳಿಸಲಾಗಿದೆಯೇ?

ಈ) ಬಾಕಿ ಪಾವತಿ ಮಾಡದೇ ಇದ್ದಲ್ಲಿ ಕಾರಣವೇನು? ಮತ್ತು ಬಾಕಿ ಪಾವತಿ ಮಾಡುವ ನಿಟ್ಟಿನಲ್ಲಿ ಏನು ಕ್ರಮ ಕೈಗೊಳ್ಳಲಾಗುವುದು?

ಉ) ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮವು ನಷ್ಟದಲ್ಲಿದೆಯೇ? ನಷ್ಟದಲ್ಲಿದ್ದಲ್ಲಿ ನಿಗಮವನ್ನು ಮುಚ್ಚುವ ಬಗ್ಗೆ ಸರ್ಕಾರ ಏನು ಕ್ರಮಕೈಗೊಂಡಿದೆ? ಮುಚ್ಚಲು ನಿರ್ಧಾರ ಕೈಗೊಂಡಿಲ್ಲದಿದ್ದಲ್ಲಿ ಅನುದಾನ ನೀಡಿ ಮುಂದುವರಿಸುವ ಇರಾದೆ ಸರ್ಕಾರಕ್ಕೆ ಇದೆಯೇ?

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು)

ಅ) ಸರ್ಕಾರದಿಂದ ನಿಗಮದ ನೌಕರರಿಗೆ ಸ್ವಯಂ ನಿವೃತ್ತಿ ಹೊಂದಲು ಆದೇಶ ಹೊಡಿಸಿರುವುದಿಲ್ಲ.

ಆ) 114 ಜನ ಸಿಬ್ಬಂದಿ ಸ್ವಯಂ ನಿವೃತ್ತಿಗಾಗಿ ಅರ್ಜಿಗಳನ್ನು ನಿಗಮಕ್ಕೆ ಸಲ್ಲಿಸಿರುತ್ತಾರೆ.

ಇ) ಮತ್ತು ಈ) ಈ ಬಗ್ಗೆ ಒಂದು ತೀರ್ಮಾನವನ್ನು ಕೈಗೊಳ್ಳಲಾಗಿದೆ.

ಉ) ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮವು ನಷ್ಟದಲ್ಲಿರುತ್ತದೆ. ಸಾರ್ವಜನಿಕ ಉದ್ದಿಮೆಗಳ ಪುನರ್ ರಚನಾ ಆಯೋಗವು ಈ ನಿಗಮವನ್ನು ಮುಚ್ಚುವ ಬಗ್ಗೆ ವರದಿಯನ್ನು ನೀಡಿರುತ್ತದೆ. ಈ ವಿಚಾರವು ಪರಿಶೀಲನೆಯಲ್ಲಿರುತ್ತದೆ.

ಮೈಸೂರಿನಲ್ಲಿ ಕೈಗಾರಿಕೆಗಳ ಸ್ಥಿತಿಗತಿ

4201 (4921) : ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) ಮಾನ್ಯ ಬೃಹತ್ ಮತ್ತು ಮಾಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೈಸೂರಿನಲ್ಲಿ ಕೈಗಾರಿಕೆಗಳು ಹೆಚ್ಚಿನ ಸಂಖ್ಯೆಯಲ್ಲಿ ಮುಚ್ಚಲ್ಪಡುತ್ತಿರಲು ಕಾರಣಗಳೇನು: